ದಿನಾಂಕಃ **25.01.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ **ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ : ನ್ಯಾಯಾಲಯದಿಂದಃ

ಕಳೆದ ಬಾರಿ ನಿಡಿ***1*** ರಿಂದ ನಿಡಿ***41*** ಎಂದು ಗುರುತಿಸಿದ ದಾಖಲೆಗಳ ಸಂಖ್ಯೆಯಲ್ಲಿ ವ್ಯತ್ಯಾಸ ಕಂಡುಬಂದಿರುವ ಕಾರಣ ನಿಡಿ***1*** ರಿಂದ ನಿಡಿ***41*** ಎಂದು ಗುರುತಿಸಿದ ದಾಖಲೆಗಳನ್ನು ಸರಿಪಡಿಸಿ ನಿಡಿ***1*** ರಿಂದ ನಿಡಿ***40*** ಎಂದು ಗುರುತಿಸಲಾಗಿದೆ.

ಪಾಟೀ ಸವಾಲು : ವಾದಿಯ ಪರ ವಕೀಲರಿಂದಃ

02. ದಾವಾ ಸ್ವತ್ತುಗಳು ಮೂಲತಃ ಚೆನ್ನಬಸವನಗೌಡ ರವರಿಗೆ ಸೇರಿದ್ದವು ಎಂದರೆ ಸರಿ. ಚೆನ್ನಬಸವನಗೌಡನವರಿಗೆ ಒಬ್ಬನೇ ಮಗ ಪಾಟೀಲ್ ಕೊಟ್ರಗೌಡ ಎಂದರೆ ಸರಿ. 1 ನೇ ಪ್ರತಿವಾದಿ ನೀಲವ್ವ ಸದರಿ ಪಾಟೀಲ್ ಕೊಟ್ರಗೌಡನ ಹೆಂಡತಿ ಎಂದರೆ ಸರಿ. ಸದರಿ ಪಾಟೀಲ್ ಕೊಟ್ರಗೌಡ ಮತ್ತು 1 ನೇ ಪ್ರತಿವಾದಿಗೆ ಪಾಟೀಲ್ ಬಸವನಗೌಡ, ರಾಮನಗೌಡ, ಮಂಜುನಾಥಗೌಡ, 5 ನೇ ಪ್ರತಿವಾದಿ ಮಂಜುಳಾ, ಸಂಗನಗೌಡ, ಚೆನ್ನಬಸವನಗೌಡ, 8 ನೇ ಪ್ರತಿವಾದಿ ತಾಯವ್ವ @ ನಂದಿನಿ ಇವರುಗಳು ಮಕ್ಕಳೆಂದರೆ ಸರಿ. ಅವರ ಪೈಕಿ ಬಸವನಗೌಡ ಮೃತಪಟ್ಟಿದ್ದು 2 ರಿಂದ 4 ನೇ ಪ್ರತಿವಾದಿಗಳು ಬಸವನಗೌಡರವರ ವಾರಸುದಾರರು ಎಂದರೆ ಸರಿ. ರಾಮನಗೌಡ ಮತ್ತು ಆತನ ಹೆಂಡತಿ ಇಬ್ಬರೂ ಮಕ್ಕಳಿಲ್ಲದೇ ಮೃತಪಟ್ಟಿದ್ದಾರೆ ಎಂದರೆ ಸರಿ. ಮಂಜುನಾಥಗೌಡ ಮತ್ತು ಆತನ ಹೆಂಡತಿ ಸಾವಿತ್ರಿ ಕೂಡ ಮೃತಪಟ್ಟಿದ್ದು, ಅವರ ಮಗನಾದ ವಾದಿಯೇ ಈ ದಾವೆ ಹಾಕಿದ್ದಾರೆ ಎಂದರೆ ಸರಿ. ಸಂಗನಗೌಡ ಮತ್ತು ಆತನ ಹೆಂಡತಿ ಸುಮಂಗಳಾ ಕೂಡ ಮಕ್ಕಳಿಲ್ಲದೇ ಮೃತಪಟ್ಟಿದ್ದಾರೆ ಎಂದರೆ ಸರಿ. ಚೆನ್ನಬಸವನಗೌಡ ಕೂಡ ಮೃತಪಟ್ಟಿದ್ದು ಆತನ ವಾರಸುದಾರರೇ 6 ಮತ್ತು 7 ನೇ ಪ್ರತಿವಾದಿಗಳು ಎಂದರೆ ಸರಿ. ಈ ದಾವೆ ನಡೆಯುತ್ತಿರುವಾಗ 6 ನೇ ಪ್ರತಿವಾದಿ ಲತಾ ಕೂಡ ಮೃತಪಟ್ಟಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. 7 ನೇ ಪ್ರತಿವಾದಿ ನಂದೀಶ ಪಾಟೀಲ್ ಪ್ರಾಪ್ತ ವಯಸ್ಸಿಗೆ ಬಂದಿಲ್ಲದ ವಕ್ತಿ ಎಂದರೆ ನನಗೆ ಮಾಹಿತಿ ಇಲ್ಲ. 7 ನೇ ಪ್ರತಿವಾದಿಯನ್ನು ಪ್ರತಿನಿಧಿಸಲು ನ್ಯಾಯಾಲಯದಿಂದ ವಕೀಲರನ್ನು ಗಾರ್ಡಿಯನ್ನಾಗಿ ನೇಮಕ ಮಾಡಲಾಗಿದೆ ಎಂದರೆ ಸರಿ. 9 ರಿಂದ 13 ನೇ ಪ್ರತಿವಾದಿಗಳಾದ ನಾವು ಚೆನ್ನಬಸವನಗೌಡನವರ ಕುಟುಂಬಕ್ಕೆ ಸೇರಿದ ವ್ಯಕ್ತಿಗಳಾಗಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಗೆ ಆಕೆಯ ಗಂಡನ ಕಡೆಯಿಂದ ಕೆಲವು ಆಸ್ತಿಗಳು ಮತ್ತು ತವರು ಮನೆಯವರಿಂದಲೂ ಕೆಲವು ಆಸ್ತಿಗಳು ಬಂದಿವೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಒಳಗೊಂಡಿರುವ ಆಸ್ತಿಗಳು ಮಾತ್ರ ಅವಿಭಕ್ತ ಕುಟುಂಬದ ಆಸ್ತಿಗಳು ಎಂದರೆ ಇನ್ನೂ ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ, ಸದರಿ ಆಸ್ತಿಗಳನ್ನು ಈ ದಾವೆಗೆ ಸೇರಿಸಿಲ್ಲ. ನಮ್ಮ ಪ್ರತಿವಾದ ಪತ್ರದಲ್ಲಿ ಇನ್ನೂ ಕೆಲವು ಆಸ್ತಿಗಳನ್ನು ಯಾರಿಗೆ ಮಾರಾಟ ಮಾಡಿದ್ದಾರೆ ಯಾವ ದಿನಾಂಕಗಳಂದು ಮಾರಾಟ ಮಾಡಿದ್ದಾರೆ ಮತ್ತು ಸದರಿ ಆಸ್ತಿಗಳ ಸರ್ವೇ ನಂಬರ್ ಹಾಗೂ ಖರೀದಿ

ಮಾಡಿದವರ ವಿವರಗಳನ್ನು ನಾವು ಬರೆಸಿದ್ದುಂಟೇ? ಎಂದರೆ ಬರೆಯಿಸಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಮಾರಾಟ ಮಾಡಿ ದಾವೆಗೆ ಸೇರಿಸದೇ ಹಾಗೇ ಬಿಟ್ಟಿರುವ ಆಸ್ತಿಗಳ ವಿವರಗಳನ್ನು ತಿಳಿಸಿದ್ದುಂಟೇ? ಎಂದರೆ ತಿಳಿಸಿಲ್ಲ.

03. 1 ನೇ ಪ್ರತಿವಾದಿಯ ಗಂಡುಮಕ್ಕಳು ಎಲ್ಲರೂ ಮೃತಪಟ್ಟ ನಂತರ ಅವರ ಮನೆಯಲ್ಲಿ ಹೆಣ್ಣುಮಕ್ಕಳು ಮಾತ್ರ ಉಳಿದುಕೊಂಡಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳು ಎಲ್ಲವೂ ಇವತ್ತಿಗೂ ವಾದಿ ಮತ್ತು 1 ರಿಂದ 8 ನೇ ಪ್ರತಿವಾದಿಗಳ ಜಂಟಿ ಸ್ವಾಧೀನಾನುಭವದಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ವಾದಿಯ ವಯಸ್ಸು 5 ವರ್ಷವಿದ್ದಾಗಲೇ ಆತನ ತಂದೆ ಮೃತಪಟ್ಟಿದ್ದರು ಎಂದರೆ ಸರಿ. ವಾದಿಗೆ 10-12 ವರ್ಷ ವಯಸ್ಸಿದ್ದಾಗ ಆತನ ತಾಯಿ ಕೂಡ ಮೃತಪಟ್ಟರು ಎಂದರೆ ಸರಿ. ತನ್ನ ತಂದೆ-ತಾಯಿ ಇಬ್ಬರೂ ಮೃತಪಟ್ಟ ನಂತರ ವಾದಿಯು ಆತನ ಸೋದರಮಾವನ ಸಂರಕ್ಷಣೆಯಲ್ಲಿ ಇದ್ದನು ಎಂದರೆ ಸರಿ. ವಾದಿಯ ಯೋಗಕ್ಷೇಮವನ್ನು 1 ಮತ್ತು 8 ನೇ ಪ್ರತಿವಾದಿಗಳು ಯಾವತ್ತೂ ನೋಡಿಕೊಂಡಿಲ್ಲ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಸ್ವತಃ ಹೇಳುತ್ತೇನೆ, ಕಿರಿಯ ವಿಭಾಗ ನ್ಯಾಯಾಲಯದಲ್ಲಿ 1 ಮತ್ತು 8 ನೇ ಪ್ರತಿವಾದಿಗಳು ಹಾಗೂ ಈ ದಾವೆಯ ವಾದಿ ಸೇರಿ ಪಾಲುವಿಭಾಗಕ್ಕಾಗಿ ದಾವೆ ಹಾಕಿದ್ದಾರೆ ಹಾಗೂ ಆ ದಾವೆಯಲ್ಲಿ ಈ ದಾವೆಯ ವಾದಿ ಈಗಾಗಲೇ ಪಾಲುವಿಭಾಗ ಆಗಿರುತ್ತದೆ ಎಂದು ತಿಳಿಸಿದ್ದಾರೆ. ವಾದಿಗೆ ಈಗ ಸುಮಾರು 27 ವರ್ಷ ಇರುತ್ತದೆ ಎಂದರೆ ಇರಬಹುದು (ವಾದಿ ನ್ಯಾಯಾಲಯದಲ್ಲಿ ಹಾಜರಿದ್ದರಿಂದ ವಾದಿಯ ವಯಸ್ಸನ್ನು ಕೇಳಿದ್ದು ಅವರು 27 ವರೆ ವರ್ಷ ವಯಸ್ಸು ಎಂದು ತಿಳಿಸಿದ್ದಾರೆ). ಓ.ಎಸ್. ನಂ. 74/2014 ರ ದಾವೆಯನ್ನು 8 ನೇ ಪ್ರತಿವಾದಿ ತಾಯವ್ವ ವಾದಿಯಾಗಿ ಸಲ್ಲಿಸಿದ್ದಾರೆ. ವಾದಿಯು ಈ ದಾವೆಯ 1 ಮತ್ತು 8 ನೇ ಪ್ರತಿವಾದಿಗಳನ್ನು ಆತನಿಗೆ ಬರಬೇಕಾದ ಹಿಸ್ಸೆ ಕೇಳಿದ್ದನು ಎಂದರೆ ಅದರ ಬಗ್ಗೆ ಗೊತ್ತಿಲ್ಲ. ಓ.ಎಸ್. ನಂ.74/2014 ರ ದಾವೆಯಲ್ಲಿ ಈ ದಾವೆಯ ವಾದಿ ಮುಂಚೆಯಿಂದಲೂ ಪಕ್ಷಕಾರರಾಗಿದ್ದರೇ? ಎಂದರೆ ನನಗೆ ಮಾಹಿತಿ ಇಲ್ಲ. ವಾದಿಯು ಹಿಸ್ಸೆ ಕೇಳಿದ್ದರಿಂದ 1 ಮತ್ತು 8 ನೇ ಪ್ರತಿವಾದಿ ಈಗಾಗಲೇ ಪಾಲುವಿಭಾಗ ದಾವೆ ನಡೆಯುತ್ತಿದೆ ಎಂಬ ಕಾರಣಕ್ಕೆ ಆ ದಾವೆಯಲ್ಲಿ ಅರ್ಜಿ ಸಲ್ಲಿಸುವ ಮೂಲಕ ವಾದಿಯನ್ನು ಆ ದಾವೆಗೆ ಪಕ್ಷಕಾರರಾಗಿ ಮಾಡಿದರು ಎಂದರೆ ನನಗೆ ಮಾಹಿತಿ ಇಲ್ಲ. ವಾದಿಗೆ ಸದರಿ ದಾವೆಯನ್ನು ಪಾಲುವಿಭಾಗಕ್ಕಾಗಿ ಸಲ್ಲಿಸಿಲ್ಲವೆಂದು ಗೊತ್ತಾಗಿದ್ದರಿಂದ ವಾದಿಯೇ ಓ.ಎಸ್. ನಂ.74/2014 ರಲ್ಲಿ ಅರ್ಜಿ ಸಲ್ಲಿಸಿ ಆ ದಾವೆಯಿಂದ ಆತನನ್ನು ವಜಾ ಮಾಡಿಸಿಕೊಂಡರು ಎಂದರೆ ನನಗೆ ಮಾಹಿತಿ ಇಲ್ಲ.

04. ನಾನು ಎಂ.ಸಿ.ಎ ಪೋಸ್ಟ್ ಗ್ರಾಜ್ಯುವೆಟ್ ಆಗಿರುತ್ತೇನೆ. ನಾನು ಓ.ಎಸ್. ನಂ.74/2014 ರಲ್ಲಿನ ದೃಢೀಕೃತ ದಾಖಲೆಗಳನ್ನು ಹಾಜರು ಮಾಡಿದ್ದೀನಾ? ಎಂದರೆ ನನಗೆ ಮಾಹಿತಿ

ಇಲ್ಲ. ಓ.ಎಸ್. ನಂ. 74/2014 ರ ವಾದ ಪತ್ರ ನಿಪಿ 207(ಎ) ದಾಖಲೆಯನ್ನು ಸಾಕ್ಷಿ ಓದಿದ ನಂತರ ಆ ದಾವೆಯನ್ನು ಪಾಲುವಿಭಾಗ ಪರಿಹಾರಕ್ಕಾಗಿ ಸಲ್ಲಿಸಿದ್ದಾರೆಯೇ? ಎಂದು ಕೇಳಿದ್ದು ಸಾಕ್ಷಿಯು ಆ ದಾವೆ ಬೇರೆ ಪರಿಹಾರಕ್ಕಾಗಿ ಮತ್ತು ಈ ದಾವೆ ಪಾಲುವಿಭಾಗಕ್ಕಾಗಿ ಸಲ್ಲಿಸಲಾಗಿದೆ ಎಂದು ಒಪ್ಪಿದ್ದಾರೆ. ನಾನು ಸದರಿ ದಾವೆಯ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರು ಮಾಡಿರಬಹುದು.

***(**ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು***).***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಹೂವಿನ ಹಡಗಲಿ.**